**ಸಮಗ್ರ ಸಸ್ಯ ಸಂರಕ್ಷಣೆ ಕ್ರಮಗಳು:**

**ಅ. ರೋಗಗಳು ಹಾಗೂ ಹತೋಟಿ:**

**ಚುಕ್ಕಿ ರೋಗ**

ಆಂಥ್ರಾಕ್ನೋಸ್ ರೋಗವು ಎಲೆಗಳ ಒಣಗುವಿಕೆ, ರೆಂಬೆ ಕೊಳೆಯುವಿಕೆ, ಚುಕ್ಕಿ ರೋಗ ಮತ್ತು ಹಣ್ಣಿನ ಮೇಲೆ ಕಲೆಯಾಗುವಿಕೆಯ ಲಕ್ಷಣಗಳನ್ನು ಉಂಟು ಮಾಡುತ್ತದೆ. ಇನ್ನೂ ಮಾಗದಕಾಯಿಯಲ್ಲಿ ಚಿಕ್ಕ, ಗಾಢ ಕಂದು ಬಣ್ಣದ ಕಲೆ, ಗುಳಿ ಮತ್ತು ಚಿಕ್ಕ ಕಲೆಗಳು ಕಾಯಿಯ ಮೇಲ್ಭಾಗದಲ್ಲಿ ಕಾಣಿಸುತ್ತವೆ.

**ನಿಯಂತ್ರಣ:**



ಈ ರೋಗವನ್ನು ಬೋರ್ಡೋ ಮಿಶ್ರಣ (3:3:50) ಅಥವಾ ಕಾಪರ್ ಆಕ್ಸಿಕ್ಲೋರೈಡ್ (ಬ್ಲೈಟಾಕ್ಸ್ ಶೇ. 0.2) ಅನ್ನು ವಾರಕ್ಕೊಮ್ಮೆ ಜುಲೈ ತಿಂಗಳಿಂದ ಸಿಂಪಡಿಸುವ ಮೂಲಕ ಪರಿಣಾಮ ಕಾರಿಯಾಗಿ ನಿಯಂತ್ರಿಸಬಹುದಾಗಿದೆ. ಅಂತರ್ ವ್ಯಾಪಿ ಶಿಲೀಂದ್ರ ನಿರೋಧಕಗಳಾದ ಕಾರ್ಬೆಂಡೆಜ್ಹಿಮ್ (ಬೆವಿಸ್ಟಿನ್ ಶೇ. 0.1) ಅಥವಾ ಥಯೋಫೆನೇಟ್ ಮಿಥೈಲ್ (ಟೋಪಿನ್ಸ್ ಎಂ ಅಥವಾ ರೋಕೋ ಶೇ. 0.1)ನ್ನು ನೀಡುವ ಮೂಲಕ ರೋಗವನ್ನು ಪರಿಣಾಮ ಕಾರಿಯಾಗಿ ನಿಯಂತ್ರಿಸಬಹುದು.

**ಬ) ಕೀಟ ಬಾಧೆ ಹಾಗೂ ಹತೋಟಿ:**

ಕಾಯಿ ಮಾಗುವ ಸಮಯದೊಂದಿಗೆ ಕಾಕ ತಾಳೀಯವೆಂಬಂತೆ ಮಾರ್ಚ್-ಏಪ್ರಿಲ್ ಮತ್ತು ಸೆಪ್ಟೆಂಬರ್-ಅಕ್ಟೋಬರ್‌ನಲ್ಲಿ ಬೆ. ಡೋರ್ಸಲಿಸ್ ಸೋಂಕು ಅತಿ ಹೆಚ್ಚು ಪ್ರಮಾಣದಲ್ಲಿರುತ್ತದೆ. ಪ್ರೌಢ ನೊಣಗಳು ಬೆಳೆಯುತ್ತಿರುವ ಕಾಯಿಗಳಲ್ಲಿ ಮೊಟ್ಟೆಗಳನ್ನಿಟ್ಟು, ಕಾಯಿಯ ಹಂತಗಳು ನೆಲಕಚ್ಚುವಂತೆ ಮಾಡುತ್ತವೆ. ಈ ಸಮಸ್ಯೆಯಿಂದ ಬೇಸಾಯದಲ್ಲಿ ಶೇ. 30 ರಿಂದ 40 ರಷ್ಟು ಇಳುವರಿ ಕುಂಠಿತವಾಗುವ ಸಾಧ್ಯತೆ ಇರುತ್ತದೆ.



**ನಿಯಂತ್ರಣ:**

ಕೊಯ್ಲಿಗೆ 45 ದಿನಗಳ ಮುಂಚೆ ಕೆಳಗೆ ಬಿದ್ದ ಹಣ್ಣುಗಳು ಮತ್ತು ಗಿಡಗಳಿಗೆ ನೀರು ಒದಗಿಸುವ ಪ್ರದೇಶಗಳಲ್ಲಿ ಡೆಲ್ಟಾಮೆಥ್ರಿನ್ (ಶೇ.0.0028)ನ್ನು ಮುಂಚಿತವಾಗಿ ಸಿಂಪಡಿಸುವ ಮೂಲಕ 8-10 ಮಿಥೈಲ್ ಯುಜಿನಾಲ್ ಟ್ರಾಪ್/ಎಕರೆ ಮತ್ತು ರೆಂಬೆಗಳಿಗೆ ಕೊಡುವುದು, ಹಾಗೂ ಶೇ. 10 ರಲ್ಲಿ 50-75 ಮಿ.ಮೀ./ಮರಕ್ಕೆ ಬೆಲ್ಲದ ಸಿಂಪಡಣೆಯ ಮೂಲಕ ಕೊಯ್ಲನ್ನು ಇನ್ನಷ್ಟು ಮುಂದೂಡುವುದು ಮುಂತಾದ ಕ್ರಮಗಳಿಂದ ಸಮಸ್ಯೆಯನ್ನು ತಗ್ಗಿಸಬಹುದು. ಪಾಕವನ್ನು 100 ಗ್ರಾಂ ಬೆಲ್ಲಕ್ಕೆ 2 ಮಿ.ಮೀ. ಡೆಕಾಮೆಥ್ರಿನ್ ಮತ್ತು ಒಂದು ಲೀಟರ್ ನೀರು ಮಿಶ್ರಣ ಮಾಡುವ ಮೂಲಕ ತಯಾರಿಸಬೇಕು. ಈ ದ್ರಾವಣವನ್ನು ಮರದ ಬುಡದಿಂದ 0.5 ಮೀ. ಮೇಲಿ ನಿಂದ ಸಿಂಪಡಿಸಬೇಕು.



**ಕೊಯ್ಲು ಮತ್ತು ಇಳುವರಿ:**

ಸೀಬೆಯಲ್ಲಿ 100 ರಿಂದ 110 ದಿನಗಳ ಬಳಿಕ ಹಣ್ಣುಗಳು ಗರಿಷ್ಠ ಬೆಳವಣಿಗೆ, ಸುಕ್ರೋಸ್ ಮತ್ತು ಪೆಕ್ಟಿನ್ ಅಂಶವನ್ನು ಹೊಂದಿರುತ್ತವೆ. ಪ್ರತಿಯೊಂದು ಹಣ್ಣು ಹಸಿರು ಮಿಶ್ರಿತ ಹಳದಿ ಬಣ್ಣಕ್ಕೆ ತಿರುಗಿದ ಬಳಿಕ ಪ್ರತ್ಯೇಕವಾಗಿ ಕೈಯಿಂದಲೇ ಕೀಳುವುದು ಉತ್ತಮ. ಗಿಡವನ್ನು ಕತ್ತರಿಸಿದಾಗ ಫಲ ನೀಡಲು 2-3 ವರ್ಷ ತೆಗೆದುಕೊಂಡರೆ ಬೀಜದಿಂದ ಮಾಡಿದ ಗಿಡಗಳು 4-5 ವರ್ಷವನ್ನು ತೆಗೆದುಕೊಳ್ಳುತ್ತವೆ. ಪ್ರತಿ ಮರದಿಂದ ವಾರ್ಷಿಕ 500 ರಿಂದ 800 ಹಣ್ಣುಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಅತ್ಯುತ್ತಮ ನಿರ್ವಹಣೆ ಮಾಡಿದರೆ 10 ವರ್ಷ ಹಳೆಯ ಮರದಿಂದ 1000 ಹಣ್ಣುಗಳನ್ನು ನಿರೀಕ್ಷಿಸಬಹುದು.


**ಲೇಖಕರು**

ಶ್ರೀ. ಪ್ರವೀಣ ಯಡಹಳ್ಳಿ
ವಿಜ್ಞಾನಿಗಳು (ತೋಟಗಾರಿಕೆ)

ಡಾ.ಎಸ್.ಎಸ್. ಹಿರೇಮಠ
ವಿಜ್ಞಾನಿಗಳು (ಸಸ್ಯ ಸಂರಕ್ಷಣೆ)

ಶ್ರೀಮತಿ. ಶ್ರೀದೇವಿ
ವಿಜ್ಞಾನಿಗಳು (ಗೃಹ ವಿಜ್ಞಾನ)

ಶ್ರೀ. ಎಸ್.ಎಂ. ವಾರದ
ವಿಜ್ಞಾನಿಗಳು (ಮಣ್ಣು ವಿಜ್ಞಾನ)

ಶ್ರೀ. ಜಿ.ಬಿ. ವಿಶ್ವನಾಥ
ವಿಜ್ಞಾನಿಗಳು (ಬೇಸಾಯ ಶಾಸ್ತ್ರ)

**ಸಂಪಾದಕರು**

ಶ್ರೀ. ಬಿ.ಆರ್. ಪಾಟೀಲ
ಅಧ್ಯಕ್ಷರು,
ಐಸಿಎಆರ್ - ಕೆಎಲ್‌ಇ ಕೆವಿಕೆ, ಮತ್ತಿಕೊಪ್ಪ

**ಪುಟ ವಿನ್ಯಾಸ**

ಶ್ರೀ. ಮಂಜುನಾಥ ಪಿ.ಬಿ.
ಗಣಕಯಂತ್ರ ಸಹಾಯಕರು

**ಅಕ್ಷರ ಜೋಡಣೆ**

ಶ್ರೀಮತಿ. ವೀಣಾ ಬನ್ನೂರು
ಬೆರಳಚ್ಚುಗಾರರು

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು
ಐಸಿಎಆರ್-ಕೆಎಲ್‌ಇ ಕೃಷಿ ವಿಜ್ಞಾನ ಕೇಂದ್ರ
ಮತ್ತಿಕೊಪ್ಪ-591 147
ತಾಲೂಕ: ಬೈಲಹೊಂಗಲ, ಜಿಲ್ಲೆ: ಬೆಳಗಾವಿ
ದೂರವಾಣಿ ಸಂಖ್ಯೆ: 9535604747
ಮಿಂಚಂಚೆ:kvk.Belagavi2@icar.gov.in,
ಅಂತರ್ಜಾಲ:www.klekvk.org



Shri Bhavani Hubli # 94481 16253


ಕೆಎಲ್‌ಇ ಸಂಸ್ಥೆಯ

# ಐಸಿಎಆರ್ - ಕೃಷಿ ವಿಜ್ಞಾನ ಕೇಂದ್ರ
## ಮತ್ತಿಕೊಪ್ಪ-591 147,

ಬೈಲಹೊಂಗಲ ತಾಲೂಕು, ಬೆಳಗಾವಿ ಜಿಲ್ಲೆ

# ಪೇರಲ ಬೆಳೆ ಸಮಗ್ರ ನಿರ್ವಹಣೆ




ಪ್ರತಿಗಳು: 1000

2019-20

